O.S.No.:504/2016
P.W.:1

ಈ ದಿನ ದಿ:06.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಮದ್ಯಂತರ ಅರ್ಜಿ ಆದೇಶ ದಿನಾಂಕ.02.02.2026ರ ಆಧಾರದ ಮೇಲೆ ಮುಂದುವರೆದ ಪಾಟೀ ಸವಾಲು:- 1 ರಿಂದ 4ನೇ ಪ್ರತಿವಾದಿಯರ ಪರ ವಕೀಲರಾದ ಶ್ರೀ ಎಸ್.ಟಿ.ಎನ್ ರವರಿಂದ:-**

1. ನಾನು ಮತ್ತು ನನ್ನ ಮಗ 2ನೇ ಪ್ರತಿವಾದಿಯ ವಿರುದ್ದ ಜೀವನಾಂಶ ಕೋರಿ ಮಳವಳ್ಳಿ ನ್ಯಾಯಾಲಯದಲ್ಲಿ ಕ್ರಿಮಿನಲ್ ಮಿಸ್ ನಂ.175/2011ರಂತೆ ಅರ್ಜಿ ಸಲ್ಲಿಸಿದ್ದೆವು ಎಂದರೆ ಸರಿ. ಸದರಿ ಕ್ರಿಮಿನಲ್ ಮಿಸ್ ನಂ.175/2011ರ ಅರ್ಜಿಯು ವಜಾಗೊಂಡಿರುತ್ತದೆ ಎಂದರೆ ಸಾಕ್ಷಿಯು ಹುಷಾರಿಲ್ಲದ ಕಾರಣ ವಜಾಗೊಂಡಿರುತ್ತದೆ ಎಂದು ನುಡಿಯುತ್ತಾರೆ. ಸದರಿ ವಜಾಗೊಂಡ ಆದೇಶದ ವಿರುದ್ದ ನಾನು ಮಂಡ್ಯ ನ್ಯಾಯಾಲಯದಲ್ಲಿ ಕ್ರಿಮಿನಲ್ ರಿವಿಷನ್ ಸಂಖ್ಯೆ 2/2014ರಂತೆ ಅಪೀಲು ಸಲ್ಲಿಸಿದ್ದೆ ಎಂದರೆ ಸರಿ. ಸದರಿಕ್ರಿಮಿನಲ್ ರಿವಿಷನ್ ಸಂಖ್ಯೆ 2/2014 ನ್ನು ನಾವು ದಿನಾಂಕ.10.10.2014ರಂದು ವಾಪಸ್ಸು ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ.

2. ನಾನು ಮತ್ತು ನನ್ನ ಮಗ 2ನೇ ಪ್ರತಿವಾದಿಯ ವಿರುದ್ದ ಜೀವನಾಂಶ ಕೋರಿ

ಮಳವಳ್ಳಿ ನ್ಯಾಯಾಲಯದಲ್ಲಿ ಕ್ರಿಮಿನಲ್ ಮಿಸ್ ನಂ.382/2014ರಂತೆ ಮತ್ತೊಂದು ಅರ್ಜಿ ಸಲ್ಲಿಸಿದ್ದೆವು ಎಂದರೆ ಸರಿ. ಸದರಿ ಅರ್ಜಿಯನ್ನು ದಿನಾಂಕ.14.09.2015ರಂದು ನಾವುಗಳೆ ವಾಪಸ್ಸು ತೆಗೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಈ ದಾವೆಯನ್ನು ಹೊರತುಪಡಿಸಿ ಪ್ರತಿವಾದಿಗಳ ವಿರುದ್ಧ ಬೇರೆ ಯಾವುದೇ ದಾವೆಗಳು ಚಾಲ್ತಿಯಲ್ಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳ ವಿರುದ್ಧ ಚಾಲ್ತಿಯಲ್ಲಿರುವ ಬೇರೆ ಪ್ರಕರಣಗಳ ಸಂಖ್ಯೆಗಳನ್ನು ನನಗೆ ಹೇಳಲು ಆಗುವುದಿಲ್ಲ.

3. 2ನೇ ಪ್ರತಿವಾದಿಯು ಈಗ ಅವರ ಮೊದಲನೇ ಹೆಂಡತಿಯ ಮಕ್ಕಳಾದ ಅರುಣ್ ಕುಮಾರ್ ಮತ್ತು ಶಿವಕುಮಾರ್ ರವರೊಂದಿಗೆ ವಾಸವಿರುತ್ತಾರೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ದಾವಾಆಸ್ತಿ ಐಟಂ ನಂ.3 ಮತ್ತು 4ನ್ನು 5ನೇ ಪ್ರತಿವಾದಿಗೆ ಯಾವಾಗ ಮಾರಾಟ ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿ 5ನೇ ಪ್ರತಿವಾದಿಗೆ ದಾವಾಆಸ್ತಿ ಐಟಂ ನಂ.3 ಮತ್ತು 4ಕ್ಕೆ ಸಂಬಂಧಿಸಿದಂತೆ ಬರೆದುಕೊಟ್ಟಂತಹ ಖರೀದಿ ಪತ್ರವನ್ನು ನೀವು ಏನಾದರೂ ನೋಡಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನೋಡಿಲ್ಲ, ಬರೆದುಕೊಟ್ಟಿರುವುದು ಸುಳ್ಳು ಎಂದು ನುಡಿಯುತ್ತಾರೆ.

4. ಪ್ರತಿವಾದಿಗಳಿಗೆ ನಾನು ಯಾವಾಗ ಭಾಗ ಕೊಡಲು ಕೇಳಿದ್ದೆ ಎಂದು ದಿನಾಂಕ,

ತಿಂಗಳು ಮತ್ತು ವರ್ಷವನ್ನು ಖಚಿತವಾಗಿ ಹೇಳಲು ಆಗುವುದಿಲ್ಲ. ಭಾಗ ಕೊಡುವಂತೆ ನ್ಯಾಯಾ ಪಂಚಾಯಿತಿ ಆಗಿತ್ತು ಎಂಬ ಬಗ್ಗೆ ನನ್ನ ವಾದಪತ್ರದಲ್ಲಿ ಹೇಳಿ ಬರೆಸಿರುತ್ತೇವೆ. ಮಹಾಲಕ್ಷ್ಮಿ ರವರು 5ನೇ ಪ್ರತಿವಾದಿಯ ಹೆಂಡತಿ ಎಂದರೆ ಸರಿ. ದಾವಾಆಸ್ತಿ ಐಟಂ ನಂ.3 ಮತ್ತು 4ರ ಖಾತೆ ಪಹಣಿಗಳು ಸದರಿ ಮಹಾಲಕ್ಷ್ಮಿ ರವರ ಹೆಸರಿನಲ್ಲಿ ಇವೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮಹಾಲಕ್ಷ್ಮಿ ರವರನ್ನು ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ.

5. ದಾವಾಆಸ್ತಿ ಐಟಂ ನಂ.1ರ ಜಮೀನು ಮೂಲತಃ ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ. ದಾವಾಆಸ್ತಿ ಐಟಂ ನಂ.1 ಪ್ರತಿವಾದಿಗಳ ಕುಟುಂಬಕ್ಕೆ ಸೇರಿದ ಜಮೀನು ಎಂದು ತೋರಿಸಲು ಯಾವುದಾದರೂ ದಾಖಲೆಗಳನ್ನು ಈ ದಾವೆಯಲ್ಲಿ ನೀವು ಹಾಜರುಪಡಿಸಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ. ದಾವಾಆಸ್ತಿ ಐಟಂ ನಂ.1ರ ಜಮೀನು ಪ್ರತಿವಾದಿಗಳ ಕುಟುಂಬಕ್ಕೆ ಸೇರಿದ್ದು ಅಲ್ಲ ಅದು ಪುಟ್ಟಸ್ವಾಮಿ ಬಿನ್ ಮುಳ್ಳೀರೇಗೌಡ ರವರಿಗೆ ಸೇರಿರುತ್ತದೆ ಎಂದರೆ ಸರಿಯಲ್ಲ.

6. ಸರ್ವೆ ನಂ.52/1 ವಿಸ್ತೀರ್ಣ 2ಎಕರೆ 21 ಗುಂಟೆ ಜಮೀನು ಯಾರಿಗೆ ಸೇರಿದ್ದು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನನ್ನ ಮಾವನವರಾದ 1ನೇ ಪ್ರತಿವಾದಿಗೆ ಸೇರಿದ್ದು ಎಂದು ನುಡಿಯುತ್ತಾರೆ. ಸದರಿ ಸರ್ವೆ ನಂ.52/1ರಲ್ಲಿರುವ

2ಎಕರೆ 21 ಗುಂಟೆ ಜಮೀನನ್ನು 1ನೇ ಪ್ರತಿವಾದಿ, ಆತನ ಹೆಂಡತಿಯಾದ ಗುರುವಮ್ಮ ಮತ್ತು ಮಗನಾದ ಹನುಮಂತಯ್ಯ ಉಃ ಮುನಿಯ ಎನ್ನುವವರು ಕರಿಯಯ್ಯ ಎನ್ನುವವರಿಗೆ ದಿನಾಂಕ.24.05.1985ರಂದು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸರ್ವೆ ನಂ.52/1ರಲ್ಲಿ ತಾವು ಖರೀದಿಸಿದ 2ಎಕರೆ 21 ಗುಂಟೆ ಜಮೀನನ್ನು ಸದರಿ ಕರಿಯಯ್ಯ ರವರು ಡಿ.ಎಂ ವಿಶ್ವನಾಥ್ ಎನ್ನುವವರಿಗೆ ದಿನಾಂಕ.17.10.2003ರಂದು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸರ್ವೆ ನಂ.52/1ರ ಜಮೀನನ್ನು ಈ ದಾವೆಯಲ್ಲಿ ಸೇರಿಸಿರುತ್ತೇನೆ.

7. ದಿನಾಂಕ.24.05.1985 ಮತ್ತು 17.10.2003ರ ಕ್ರಯಪತ್ರಗಳನ್ನು ಈ ದಾವೆಯಲ್ಲಿ ನಾನು ಪ್ರಶ್ನಿಸಿರುತ್ತೇನೆ. ದಾವಾಆಸ್ತಿ ಐಟಂ ನಂ.3 ಮತ್ತು 4ರ ಜಮೀನುಗಳು 1ನೇ ಪ್ರತಿವಾದಿ ಮತ್ತು ಆತನ ತಾಯಿಯಾದ ಗುರುವಮ್ಮ ರವರಿಗೆ ದಿನಾಂಕ.26.12.1976ರ ದಾನಪತ್ರದಡಿಯಲ್ಲಿ ಬಾಲನಕಾಳಯ್ಯ ರವರಿಂದ ಬಂದಿರುತ್ತದೆ ಎಂದರೆ ಸರಿ. ದಾವಾಆಸ್ತಿ ಐಟಂ ನಂ.3 ಮತ್ತು 4ರ ಜಮೀನುಗಳು 1ನೇ ಪ್ರತಿವಾದಿ ಮತ್ತು ಆತನ ತಾಯಿಯಾದ ಗುರುವಮ್ಮ ರವರ ಸ್ವಯಾರ್ಜಿತ ಸ್ವತ್ತುಗಳು ಎಂದರೆ ಸರಿ. ದಾನಪತ್ರದ ಆಧಾರದ ಮೇಲೆ ದಾವಾಆಸ್ತಿ ಐಟಂ ನಂ.3 ಮತ್ತು 4ರ ಜಮೀನಿನ ಖಾತೆಗಳು 1ನೇ ಪ್ರತಿವಾದಿ ಮತ್ತು ಆತನ ತಾಯಿಯಾದ ಗುರುವಮ್ಮ ರವರ ಹೆಸರಿಗೆ ಇದ್ದವು ಮತ್ತು ಅವರೆ ಆ ಜಮೀನುಗಳ

ಸ್ವಾಧೀನಾನುಭವದಲ್ಲಿದ್ದರು ಎಂದರೆ ಸರಿ.

8. ನಂತರದಲ್ಲಿ 1ನೇ ಪ್ರತಿವಾದಿ ಮತ್ತು ಆತನ ತಾಯಿಯಾದ ಗುರುವಮ್ಮ ರವರು ದಾವಾಆಸ್ತಿ ಐಟಂ ನಂ.4ನ್ನು 5ನೇ ಪ್ರತಿವಾದಿಗೆ ದಿನಾಂಕ.01.09.1995ರಂದು ಖರೀದಿ ಪತ್ರದಡಿಯಲ್ಲಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾಆಸ್ತಿ ಐಟಂ ನಂ.4ರ ಜಮೀನನ್ನು ಖರೀದಿ ಮಾಡಿದಾಗಿನಿಂದಲ್ಲೂ 5ನೇ ಪ್ರತಿವಾದಿಯೇ ಅದರ ಸ್ವಾಧೀನಾನುಭವದಲ್ಲಿ ಇದ್ದರು, ಅವರ ಮರಣದ ನಂತರ ಅವರ ಕುಟುಂಬದವರು ಅದರ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ.

9. ಗುರುವಮ್ಮ ರವರಿಗೆ 1ನೇ ಪ್ರತಿವಾದಿ ಒಬ್ಬನೇ ಮಗ ಎಂದರೆ ಸರಿ. ಗುರುವಮ್ಮ ರವರ ಮರಣದ ನಂತರ ದಾವಾಆಸ್ತಿ ಐಟಂ ನಂ.3ರ ಖಾತೆಯು ನೇರವಾಗಿ 1ನೇ ಪ್ರತಿವಾದಿಯ ಹೆಸರಿಗೆ ಆಗಿರುತ್ತದೆ ಎಂದರೆ ಸರಿ. ಅಂದಿನಿಂದ ದಾವಾಆಸ್ತಿ ಐಟಂ ನಂ.3ರಲ್ಲಿ 1ನೇ ಪ್ರತಿವಾದಿಯೇ ಸ್ವಾಧೀನದಲ್ಲಿದ್ದರು ಎಂದರೆ ಸರಿ. ನಂತರದಲ್ಲಿ 1ನೇ ಪ್ರತಿವಾದಿಯು ದಾವಾಆಸ್ತಿ ಐಟಂ ನಂ.3ನ್ನು ದಿನಾಂಕ.15.09.2012ರಂದು ಕ್ರಯಪತ್ರದಡಿಯಲ್ಲಿ 5ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಖರೀದಿ ಪತ್ರದ ಆಧಾರದ ಮೇಲೆ

5ನೇ ಪ್ರತಿವಾದಿಯ ಹೆಸರಿಗೆ ದಾವಾಆಸ್ತಿ ಐಟಂ ನಂ.3ರ ಖಾತೆ ಆಗಿರುತ್ತದೆ ಎಂದರೆ ಸರಿಯಲ್ಲ. ದಾವಾಆಸ್ತಿ ಐಟಂ ನಂ.3ರ ಜಮೀನನ್ನು ಖರೀದಿ ಮಾಡಿದಾಗಿನಿಂದಲ್ಲೂ 5ನೇ ಪ್ರತಿವಾದಿಯೇ ಅದರ ಸ್ವಾಧೀನಾನುಭವದಲ್ಲಿ ಇದ್ದರು, ಅವರ ಮರಣದ ನಂತರ ಅವರ ಕುಟುಂಬದವರು ಅದರ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ.

10. ದಾವಾಆಸ್ತಿ ಐಟಂ ನಂ.3 ಮತ್ತು 4ರ ಜಮೀನುಗಳು 1ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಆಗಿರುವ ಕಾರಣಕ್ಕೆ ಅದರಲ್ಲಿ ವಾದಿಗೆ ಯಾವುದೇ ಪ್ರಕಾರದ ಹಿಸ್ಸಾ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾಆಸ್ತಿ ಐಟಂ ನಂ.3 ಮತ್ತು 4 ನ್ನು 5ನೇ ಪ್ರತಿವಾದಿಯು ಈಗಾಗಲೇ 1ನೇ ಪ್ರತಿವಾದಿಯಿಂದ ಖರೀದಿ ಮಾಡಿ ಅದರ ಸ್ವಾಧೀನಾನುಭವದಲ್ಲಿ ಇರುವ ಕಾರಣಕ್ಕೆ 5ನೇ ಪ್ರತಿವಾದಿಯು ಸದ್ಭಾವನೆಯ ಖರೀದಿದಾರರು ಹಾಗಾಗಿ ಅದರಲ್ಲಿ ವಾದಿಗೆ ಯಾವುದೇ ಹಿಸ್ಸಾ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾಆಸ್ತಿ ಐಟಂ 3 ಮತ್ತು 4 ರಲ್ಲಿ ನಾವುಗಳು ಈಗ ಸ್ವಾಧೀನದಲ್ಲಿ ಇಲ್ಲ ಎಂದರೆ ಸಾಕ್ಷಿಯು ನಮ್ಮ ಮಾವನವರು ಇರುತ್ತಾರೆ ಎಂದು ನುಡಿಯುತ್ತಾರೆ. ಕ್ರಯದ ದಿನಾಂಕದಿಂದ ಇಂದಿನ ವರೆಗೂ ದಾವಾಆಸ್ತಿ ಐಟಂ ನಂ.3 ಮತ್ತು 4ರ ಖಾತೆಗಳು 5ನೇ ಪ್ರತಿವಾದಿ ಮತ್ತು ಆತನ ವಾರಸುದಾರರ ಹೆಸರಿನಲ್ಲಿ ಇವೆ ಎಂದರೆ ಸರಿಯಲ್ಲ. 5ನೇ ಪ್ರತಿವಾದಿಯ ಹೆಸರಿಗೆ ಆದಂತಹ ಕ್ರಯಪತ್ರಗಳನ್ನು ಈ ದಾವೆಯಲ್ಲಿ ನಾನು ಪ್ರಶ್ನಿಸಿಲ್ಲ ಎಂದರೆ ಸರಿಯಲ್ಲ.

11. ದಾವಾಆಸ್ತಿ ಐಟಂ ನಂ.2ಕ್ಕೆ ಸಂಬಂಧಿಸಿದಂತೆ 1ನೇ ಪ್ರತಿವಾದಿ ಮತ್ತು ಆತನ ತಾಯಿಯಾದ ಗುರುವಮ್ಮ ರವರು 5ನೇ ಪ್ರತಿವಾದಿಗೆ ದಿನಾಂಕ.09.11.2007ರಂದು ನೋಂದಾಯಿತ ಭೋಗ್ಯ ಪತ್ರದಡಿಯಲ್ಲಿ ಭೋಗ್ಯ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಭೋಗ್ಯ ಇದುವರೆಗೂ ರದ್ದಾಗಿಲ್ಲ ಎಂದರೆ ಸರಿಯಲ್ಲ. ದಾವಾಆಸ್ತಿ ಐಟಂ ನಂ.2ಕ್ಕೆ ಸಂಬಂಧಿಸಿದಂತೆ 5ನೇ ಪ್ರತಿವಾದಿಗೆ ಆದಂತಹ ಭೋಗ್ಯ ಪತ್ರದ ಬಗ್ಗೆ ನನ್ನ ವಾದಪತ್ರದಲ್ಲಿ ನಾನು ಹೇಳಿ ಬರೆಸಿಲ್ಲ ಎಂದರೆ ಸರಿ. ದಾವಾಸ್ವತ್ತುಗಳಲ್ಲಿ ವಾದಿಗೆ ಯಾವುದೇ ಹಿಸ್ಸಾ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾಸ್ವತ್ತುಗಳಲ್ಲಿ ವಾದಿಗೆ ಯಾವುದೇ ಹಕ್ಕು ಅಧಿಕಾರ ಹಿಸ್ಸೆ ಇಲ್ಲದೆ ಇದ್ದರು ಪ್ರತಿವಾದಿಗಳಿಗೆ ತೊಂದರೆ ಕೊಡಲು ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ- ಇಲ್ಲ.**

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ,**

**(ರಾಧ.ಎಸ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕನಕಪುರ.**